ಒ ಎಸ್ 101/2018 ಪಿ.ಡಬ್ಲ್ಯೂ 1

ಇಂದು ದಿಃ 11.09.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 16ನೇ ಪ್ರತಿವಾದಿ ಪರ ಶ್ರೀ ಜಿ ಎಸ್ ವಕೀಲರಿಂದಃ

2ನೇ ಪ್ರತಿವಾದಿ ನನ್ನ ತಂಗಿ. ನಾನು ಸಹಿ ಮಾಡುತ್ತೇನೆ. ನಾನು ಯಾವ ಇಸವಿಯಲ್ಲಿ ಹುಟ್ಟಿದೆ ಎಂದು ಗೊತ್ತಿಲ್ಲ. ಸರ್ವೆ ನಂ. 230 ಮತ್ತು 231 ಕ್ಕೆ ನಾನು ದಾವೆಯನ್ನು ಸಲ್ಲಿಸಿದ್ದೇನೆ. ಪೂರ್ವದಲ್ಲಿ ಆ ಆಸ್ತಿಗಳು ನನ್ನ ತಾತನಿಗೆ ಸೇರಿದ್ದವು. ನನ್ನ ತಾತನಿಗೆ ಆ ಆಸ್ತಿಗಳು ಸೇರಿದ್ದವು ಎನ್ನುವುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ದಾಖಲೆಯಾಗಿ ಕೈ ಬರಹದ ಆರ್ ಟಿ ಸಿ ಕೊಟ್ಟಿದ್ದೇನೆ. ನನ್ನ ತಾತನ ಹೆಸರು ಪುಟ್ಟೇಗೌಡ. ದಾವಾ ಆಸ್ತಿಗಳು ಪುಟ್ಟೇಗೌಡನ ಆಸ್ತಿ ಎಂದು ಹೇಳುತ್ತಿದ್ದೇನೆ. ಅವರಿಗೆ ಕ್ರಯ ಪತ್ರದ ಮೂಲಕ ಆಸ್ತಿ ಬಂತು, ಆದರೆ ಆ ಕ್ರಯ ಪತ್ರಗಳು ಯಾವುದು ಎಂದು ನನಗೆ ಗೊತ್ತಿಲ್ಲ.

ದಾವೆಯಲ್ಲಿ ತೋರಿಸಿರುವ ವಂಶವೃಕ್ಷದಂತೆ ನಾವು ಪುಟ್ಟೇಗೌಡನ ಮೊಮ್ಮಕ್ಕಳು ಎಂದು ತೋರಿಸಲು ತಾಲ್ಲೂಕು ಕಛೇರಿಯಿಂದ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಹಾಗೂ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ದಾವಾ ಆಸ್ತಿಗಳು ಮಿಣ್ಣಮ್ಮನಿಗೆ ಅವರ ತಾಯಿಯ ಮೂಲಕ ಬಂದಿರುತ್ತವೆ. ಮಿಣ್ಣಮ್ಮನ ತಾಯಿಗೆ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ದಿ. 18.10.1960 ನೊಂದಾಯಿತ ಕ್ರಯ ಪತ್ರದ ಮೂಲಕ ದಾವಾ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜಿ ಆಸ್ತಿ ಖರೀದಿಸುವಾಗ ನಾನು ಹುಟ್ಟಿರಲಿಲ್ಲ ಆ ಕಾರಣ ಆ ಕ್ರಯ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ನಮ್ಮ ಮನೆಯ ವ್ಯವಹಾರದ ವಿಚಾರಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಮಿಣ್ಣಮ್ಮನ ಸ್ವಯಾರ್ಜಿತ ಆಸ್ತಿ, ಅದರಲ್ಲಿ ನನಗಾಗಲಿ, ನನ್ನ ತಂದೆಗಾಗಲಿ ಹಕ್ಕು ಇಲ್ಲದಿದ್ದರೂ ಸಹ ದುರ್ಲಾಭಕ್ಕಾಗಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ನಿಪಿ 18 ರಿಂದ 27ರವರೆಗಿನ ಆಸ್ತಿಗಳು 1ನೇ ಪ್ರತಿವಾದಿಯ ಹೆಸರಿನಲ್ಲಿ ಬಂದಿರುವ ಆರ್ ಟಿ ಸಿ ಗಳು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಯಾರಿಗೂ ಸಹ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಮಾರಾಟ ಮಾಡಿದ ದಾವಾ ಆಸ್ತಿಯ ಕ್ರಯಪತ್ರಕ್ಕೆ ನನ್ನ ತಂದೆ 3ನೇ ಪ್ರತಿವಾದಿ ಸಹಿ ಮಾಡಿ 6ನೇ ಪ್ರತಿವಾದಿ ಕಾಳಮ್ಮನಿಗೆ ಮಾರಾಟ ಮಾಡಿದ್ದಾರೆ ಎಂದರೆ ನನ್ನ ತಂದೆ ಮಾತ್ರ ಸಹಿ ಮಾಡಿದ್ದಾರೆ ಎನ್ನುತ್ತಾರೆ. ನಿಪಿ 1 ರಲ್ಲಿ ನನ್ನ ತಂದೆ, ಅಜ್ಜಿ, ಚಿಕ್ಕಪ್ಪ ಹೆಬ್ಬೆಟ್ಟು ಹಾಕಿರುವುದು ಕಂಡು ಬಂದಿದೆ ಎಂದರೆ 3 ಜನ ಹೆಬ್ಬೆಟ್ಟು ಹಾಕಿದ್ದಾರೆ ಎನ್ನುತ್ತಾರೆ.

ನಿಪಿ 3 ರ ಕ್ರಯ ಪತ್ರದಂತೆ ನನ್ನ ಅಜ್ಜಿ, ತಂದೆ ಹಾಗೂ ಚಿಕ್ಕಪ್ಪ ದಿನಾಂಕ 05.09.2005ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ ಇನ್ನೊಂದು ಆಸ್ತಿಯನ್ನು 6ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತು. 2004 ರಿಂದ ಈವರೆಗೂ ಈ ದಾವೆ ಹೊರತುಪಡಿಸಿ ಬೇರೆ ಪ್ರಕರಣ ದಾಖಲಿಸಿಲ್ಲ. ಈ ಮೊದಲೇ ಪ್ರಕರಣ ಸಲ್ಲಿಸಲು ತೊಂದರೆ ಇತ್ತೇ ಎಂದರೆ ನಮಗೆ ಗೊತ್ತಿಲ್ಲದೇ ಮಾರಾಟ ಮಾಡಿದ್ದರು ಹಾಗಾಗಿ ಪ್ರಕರಣ ದಾಖಲಿಸಿರಲಿಲ್ಲ ಎನ್ನುತ್ತಾರೆ. ಈ ವಿಚಾರಗಳು ಮೊದಲೇ ತಿಳಿದಿದ್ದರೂ ಸಹ ಜಮೀನಿನ ಮೌಲ್ಯ ಈಗ ಹೆಚ್ಚಾದ ಕಾರಣ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು, ನನ್ನ ತಾಯಿ, ನನ್ನ ಅತ್ತೆ, ನನ್ನ ತಂಗಿ ಸಾವಿತ್ರಿ, ನನ್ನ ಅಜ್ಜಿ, ತಂದೆ ಹಾಗೂ ಚಿಕ್ಕಪ್ಪ 1 ಎಕರೆ 35 ಗುಂಟೆ ಜಮೀನಿನನ್ನು ದಿನಾಂಕ 15.03.2013 ರಂದು ಹುಲ್ಲಹಳ್ಳಿಯ ಶ್ರೀನಿವಾಸ್ ಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ ಸಾಕ್ಷಿಯು ಸದರಿ ದಾಖಲೆಯನ್ನು ಗುರುತಿಸಿದ ಮೇರೆಗೆ ನಿ ಡಿ 1 ಎಂದು ಗುರುತಿಸಲಾಯಿತು. ನಿ ಡಿ 1 ಕ್ಕೆ ಸಹಿ ಮಾಡುವಾಗ 2004-05ರಲ್ಲಿ ನೀವು ಮಾರಾಟ ಮಾಡಿದ್ದೀರಿ ನಾನು ಸಹಿ ಮಾಡುವುದಿಲ್ಲ ಎಂದು ನಾನು ತಕರಾರು ಮಾಡಿರುವುದಿಲ್ಲ. ನನ್ನ ಅಜ್ಜಿ 1960ರಲ್ಲಿ ಖರೀದಿಸಿದ ದಾವಾ ಜಮೀನಿನ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ದಾಖಲೆಯನ್ನು ನಿ ಡಿ 2 ಎಂದು ಗುರುತಿಸಲಾಯಿತು. 1960ರಲ್ಲಿಯೇ ದಾವಾ ಆಸ್ತಿಯ ಕ್ರಯ ಪತ್ರ ನನ್ನ ಅಜ್ಜಿ 1ನೇ ಪ್ರತಿವಾದಿ ಹೆಸರಿನಲ್ಲಿ ಆದ ಕಾರಣ ನಮಗೆ ಯಾರಿಗೂ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಂತರ 6ನೇ ಪ್ರತಿವಾದಿಗೆ ನಾವೆಲ್ಲರೂ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ ಕಾರಣ ಅವರು ಕಾನೂನು ಬದ್ಧ ಮಾಲೀಕರು ಎಂದರೆ ಸರಿಯಲ್ಲ. ನಂತರ 2016ರಲ್ಲಿ 6ನೇ ಪ್ರತಿವಾದಿ ಮತ್ತು ಅವರ ಮಕ್ಕಳಿಂದ 16ನೇ ಪ್ರತಿವಾದಿ ಕ್ರಯಕ್ಕೆ ಪಡೆದುಕೊಂಡರು ಎಂದರೆ ಮಾಡಿದ್ದಾರೆ ಆದರೆ ನನಗೆ ಗೊತ್ತಿಲ್ಲದೆ ಮಾಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿಗಳ ವಿರುದ್ಧ ನಾನು ಯಾವುದೇ ಕ್ರಿಮಿನಲ್ ಪ್ರಕರಣ ದಾಖಲು ಮಾಡಿಲ್ಲ. ನಾನು ಕೊಟ್ಟ ನೋಟೀಸ್ ಗೆ 1ನೇ ಪ್ರತಿವಾದಿಯು ಉತ್ತರ ಕೊಟ್ಟು ಅದು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ತಿಳಿಸಿದ್ದರು ಎಂದರೆ ಗೊತ್ತಿಲ್ಲ. 17ನೇ ಪ್ರತಿವಾದಿ ದಾಖಲಿಸಿರುವ ಪ್ರತಿವಾದ ಪತ್ರದ ವಿವರಗಳನ್ನು ತಿಳಿದುಕೊಳ್ಳಲು ನನಗೆ ತೊಂದರೆ ಇರಲಿಲ್ಲ. ದಾವಾ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆದ ಕಾರಣ ನಮಗೆ ಯಾರಿಗೂ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಕ್ರಯ ಪತ್ರಗಳು 6 ಮತ್ತು 16ನೇ ಪ್ರತಿವಾದಿಗಳಿಗೆ ಸೇರಿದ ಕ್ರಯ ಪತ್ರಗಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.